of the environment in the region will be made before clearing the projects in the district. ಎಂದು ಕೊಟ್ಟಿದ್ದೀರಲ್ಲಾ ಇದಕ್ಕೆ ಏನು ಅರ್ಥ?

ಶ್ರೀ ಆರ್. ವಿ. ದೇಶಪಾಂಡೆ : ತಾವು ಇದರ ಮೇಲೆ ಸಪರೇಟಾಗಿ ಪ್ರಶ್ನೆ ಹಾಕಿ ಉತ್ತರ ಕೊಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಗೆ ವಸತಿ ಯೋಜನೆಗೆ ಬಿಡುಗಡೆ ಮಾಡಿದ ಹಣ.

27 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1995-96ನೇ ಸಾಲಿಗೆ ದಕ್ಷಿಣ ಕನ್ನಡ ಜಿಲ್ಲೆಗೆ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮನೆಗಳು ಮಂಜೂರಾಗಿವೆಯೇ. ಈ ಪೈಕಿ ಎಷ್ಟು ಹಣ ಬಿಡುಗಡೆ ಆಗಿದೆ. 1994-95ರಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು. ಬರಬೇಕಾದ ಬಾಕಿ ಹಣವೆಷ್ಟು. ಉಡುಪಿ ತಾಲ್ಲೂಕಿಗೆ 1993-94, 1994-95ನೇ ಸಾಲಿನ ಆಶ್ರಯ ಇ, ಅಂಬೇಡ್ಕರ್ ಇಂದಿರಾ ಆವಾಸ್ ಮನೆಗಳಿಗೆ ಬರಬೇಕಾದ ಬಾಕಿ ಹಣವೆಷ್ಟು?

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

1)

		ಆಶ್ರಯ	ಅಂಬೇಡ್ಕರ್	ಇಂದಿರಾ ಆವಾಸ್
1995-96	ಮಂಜೂರಾದ ಮನೆ	2800	1551	1330
	ಬಿಡುಗಡೆಯಾದ ಹಣ	430.00	221.00	94.00
1995-96	ಪ್ರಾರಂಭಿಸಿದ ಮನೆಗಳು	6409	1770 (ಹಿಂದಿನ ಮನೆಗಳು ಸೇರಿ)	484
1994-95	ಬಿಡುಗಡೆಯಾದ ಹಣ ಹಾಗೂ ಹಿಂದಿನ ಸಾಲಿನ ಉಳಿಕೆ ಹಣ ಸೇರಿ	653.49	153.59	80.00
	ಪ್ರಾರಂಭಿಸಿದ ಮನೆಗಳನ್ನು ಪೂರ್ಣಗೊಳಿಸಲು ಬಿಡುಗಡೆ ಮಾಡಬೇಕಾದ ಹಣ	307.00	111.91	-

ಉಡುಪಿ ತಾಲ್ಲೂಕಿಗೆ 93-94ನೇ 94-95ನೇ ಸಾಲಿಗೆ ಬಿಡುಗಡೆಯಾದ ಹಣ (ರೂ. ಲಕ್ಷಗಳಲ್ಲಿ)

	ಬಿಡುಗಡೆಯಾದ ಹಣ		ಬಿಡುಗಡೆ ಮಾಡಬೇಕಾದ ಹಣ	
	93-94	94-95	93-94	94-95
ಆಶ್ರಯ	149.00	99.00	20.00	67.00
ಅಂಬೇಡ್ಕರ್	44.00	11.00	ಇಲ್ಲ	4.00
ಇಂದಿರಾ ಆವಾಸ್	9.86	9.00	ಇಲ್ಲ	ಇಲ್ಲ

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಶ್ರಯ ಮನೆಗಳು ಎಷ್ಟು ಮುಗಿದಿವೆ, ಅಂಬೇಡ್ಕರ್ ಮನೆಗಳು ಎಷ್ಟು ಮುಗಿದಿವೆ, ಅದೇ ರೀತಿಯಲ್ಲಿ ಇಂದಿರಾ ಆವಾಸ್ ಮನೆಗಳು ಎಷ್ಟು ಮುಗಿದಿವೆ ಹಾಗೂ ಅದಕ್ಕೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಹಾಗೂ ಎರಡನೇ ಪ್ರಶ್ನೆ 1993-94 ಮತ್ತು 1994-95ನೇ ಇಸವಿಯಲ್ಲಿ ಉಡುಪಿ ತಾಲ್ಲೂಕಿಗೆ ಬರಬೇಕಾದಂತಹ ಆಶ್ರಯ ಮನೆಗೆ ಎಷ್ಟು ಹಣ ಬಾಕಿ ಇದೆ.

ಅಂಬೇಡ್ಕರ್ ಮನೆಗೆ ಎಷ್ಟು ಬಾಕಿ ಇದೆ, ಅದೇ ರೀತಿಯಲ್ಲಿ ಇಂದಿರಾ ಆವಾಸ್‌ನಲ್ಲಿ ಎಷ್ಟು ಹಣ ಬಾಕಿ ಇದೆ. ಅದಕ್ಕೆ 1994-95ರಲ್ಲಿ 91 ಲಕ್ಷ ರೂಪಾಯಿ ಇಟ್ಟಿದ್ದೀರಿ. ಉಡುಪಿ ತಾಲ್ಲೂಕಿಗೆ 1995-96ನಾ ಸಾಲಿಗೆ ಇನ್ನೂ ಹಣ ಬರುವುದಿದೆ. ಅದು ಸುಮಾರು 15 ಲಕ್ಷ ರೂಪಾಯಿ ಮಾತ್ರ ನೀವು ಒಂದೊಂದು ತಾಲ್ಲೂಕಿಗೆ ಬಿಡುಗಡೆ ಈ ವರ್ಷ ಮಾಡಿದ್ದೀರಿ. ಈಗಾಗಲೇ ಇದರ ಬಗ್ಗೆ ಚರ್ಚೆಯಾಗಿದೆ. ಅದಕ್ಕೆ ತಾವು ಈ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಮತ್ತು ಬಾಕಿ ಇದ್ದ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ?

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪ್ರತಾಪ ಚಂದ್ರ ಶೆಟ್ಟಿಯವರು ಇದೇ ರೀತಿಯ ಪ್ರಶ್ನೆಯನ್ನು ಕೇಳಿದಾಗ ಉತ್ತರವನ್ನು ಕೊಟ್ಟಿದ್ದೇವೆ. ಉಡುಪಿ ತಾಲ್ಲೂಕಿಗೆ ಸಂಬಂಧಿಸಿದಂತೆ 1993-94ನೇ ಸಾಲಿನ ಮನೆಗಳಿಗೆ ನಿಮ್ಮಲ್ಲಿ 1,130 ಆಶ್ರಯ ಯೋಜನೆಯಲ್ಲಿ ಪ್ರಾರಂಭ ಮಾಡಿದ್ದೇವೆ. ಇದಕ್ಕೆ ಬೇಕಾದಂತಹ ಸಂಪೂರ್ಣ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ. 20 ಲಕ್ಷ ರೂಪಾಯಿ ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಬೇಕು. ಅದನ್ನು ಕೂಡಲೇ ಬಿಡುಗಡೆ ಮಾಡುವುದಕ್ಕೆ ನಾನು ಆದೇಶ ಮಾಡುತ್ತೇನೆ. ಮತ್ತು ಉಳಿದಂತಹ ಹಣ ಈ ವರ್ಷದ ಯೋಜನೆಯಲ್ಲಿ 67 ಲಕ್ಷ ರೂಪಾಯಿಯನ್ನು ಆಶ್ರಯಕ್ಕಾಗಿ ನಿಮ್ಮ ಉಡುಪಿ ತಾಲ್ಲೂಕಿಗೆ ಕೊಡಬೇಕು. ವರ್ಷಾಂತ್ಯದಲ್ಲಿ ಅದನ್ನು ಒದಗಿಸಿಕೊಡುತ್ತೇವೆ. ಇಂದಿರಾ ಆವಾಸಗೆ 75 ಪರ್ಸೆಂಟ್ ಹಣವನ್ನು ಬಿಡುಗೆಡೆ ಮಾಡಿದ್ದೇವೆ. ನಿಮ್ಮ ತಾಲ್ಲೂಕಿಗೆ ಇನ್ನೂ ಹಣ ಬೇಕಾದಲ್ಲಿ ಉಳಿದಂತಹ ಹಣವನ್ನು ಕೂಡಲೇ ಬಿಡುಗಡೆ ಮಾಡುತ್ತೇನೆ.

12.40 ಪಿ.ಎಂ.

ಶ್ರೀ ವಸಂತ ವಿ. ಸಾಲಿಯಾನ : ನಮ್ಮ ಉಡುಪಿ ತಾಲ್ಲೂಕಿಗೆ 73 ಲಕ್ಷ ರೂಪಾಯಿ ಬರಬೇಕಾಗಿತ್ತು, ಅದಕ್ಕೆ ನೀವು ಕೇವಲ 15 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ.

ಈಗ ಕಟ್ಟುತ್ತಿರುವಂಥ ಮನೆಗಳು ಅರ್ಧಕ್ಕೆ ನಿಂತುಹೋಗಿವೆ. ಆದ್ದರಿಂದ ತಮ್ಮ ಹತ್ತಿರ ವಿಜ್ಞಾಪನೆ ಮಾಡುತ್ತೇನೆ. ದಯವಿಟ್ಟು ಈ ಹಣವನ್ನು ಬಿಡುಗಡೆ ಮಾಡಬೇಕು. ಮತ್ತು 1993-94, 1994-95ರಲ್ಲಿ ಏನು ಬಾಕಿ ಸುಮಾರು 91 ಲಕ್ಷ ರೂಪಾಯಿ ಇದೆ ಅದನ್ನೂ ಸಹ ತಾವು ಬಿಡುಗಡೆ ಮಾಡಬೇಕು. ಏಕೆಂದರೆ ನಮ್ಮ ಒಂದು ತಾಲ್ಲೂಕಿಗೆ ಕೆಲಸ ಅರ್ಧಕ್ಕೆ ನಿಂತುಹೋಗಿದೆ.

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೆ, ಈಗಾಗಲೇ ಹಣವನ್ನು ಜಿಲ್ಲಾಪರಿಷತ್ತಿಗೆ ಬಿಡುಗಡೆ ಮಾಡಲಾಗಿದ್ದು, ಜಿಲ್ಲಾಪರಿಷತ್ತಿನಿಂದ ಅವರಿಗೆ ಕೂಡಲೇ ಹಣ ಬಿಡುಗಡೆಯಾಗುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಬಾಕಿ ಉಳಿದಂಥ ಹಣವನ್ನೂ ಕೂಡ ವರ್ಷಾಂತ್ಯದಲ್ಲಿ ಬಿಡುಗಡೆ ಮಾಡುತ್ತೇನೆ.

. ಅಧ್ಯಕ್ಷರು : ಪ್ರಶ್ನೋತ್ತರ ಮುಕ್ತಾಯವಾಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಆರ್. ವಿ. ದೇಶಪಾಂಡೆ (ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 29ನೇ ಫೆಬ್ರವರಿ 96ರ 7ನೇ ಪಟ್ಟಿಯಲ್ಲಿರುವ 95 ಪ್ರಶ್ನೆಗಳ ಪೈಕಿ 60 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ಹುಬ್ಬಳ್ಳಿ-ಧಾರವಾಡ ನಗರದಲ್ಲಿನ ರಸ್ತೆಗಳ ದುರಸ್ಥಿ

465 - ಶ್ರೀ ಅಶೋಕ್ ಎಸ್. ಕಾಟ್ವೆ (ಹುಬ್ಬಳ್ಳಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ಪ್ರದೇಶದಲ್ಲಿರುವ ಒಟ್ಟು ರಸ್ತೆ ಎಷ್ಟು? ಇದರಲ್ಲಿ ಡಾಂಬರೀಕರಣಗೊಂಡಿರುವುದು ಎಷ್ಟು? ಮೆಟಲಿಂಗ್ ರಸ್ತೆಗಳೆಷ್ಟು? ಕಚ್ಚಾ ರಸ್ತೆ ಎಷ್ಟು?

ಆ) ಮೆಟಲಿಂಗ್ ರಸ್ತೆ ಇದ್ದಲ್ಲಿ ಡಾಂಬರೀಕರಣಕ್ಕಾಗಿ ಎಷ್ಟು ಹಣ ನಿಗದಿಪಡಿಸಲಾಗಿದೆ? ನಿಗಧಿಪಡಿಸಿದ್ದಲ್ಲಿ 1995-96ನೇ ಸಾಲಿಗೆ ಎಷ್ಟು ಹಣ ವಿನಿಯೋಗಿಸಲಾಗಿದೆ? ಕಚ್ಚಾ ಇರುವ ರಸ್ತೆ ಎಷ್ಟು ಕಾಲಾವಧಿಯಲ್ಲಿ ಮೆಟಲಿಂಗ್ ಮಾಡಿಸಲಾಗುವುದು? ಇದಕ್ಕಾಗಿ ಕೈಗೊಂಡ ಕ್ರಮ ಯಾವ ಹಂತದಲ್ಲಿದೆ?

ಇ) ಮಹಾನಗರ ಪಾಲಿಕಾ ಪ್ರದೇಶದಲ್ಲಿರುವ ಉದ್ಯಾನವನಗಳೆಷ್ಟು? ಇವುಗಳ ಸುಧಾರಣೆಗಾಗಿ 1994-95 ಮತ್ತು 1995-96ನೇ ಸಾಲಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) 550 ಕಿ.ಮೀ.

ಡಾಂಬರೀಕರಣಗೊಂಡಿರುವ ರಸ್ತೆ 355 ಕಿ.ಮೀ